# ಅಮೀರ್: ಹೊಸ ಸಸ್ಪೆನ್ಸ್!

‘ಬಾಲಿವುಡ್ ಬಾದ್‌ಷಾ’ ಎಂದು ಪತ್ರಕರ್ತರು ಶಾರೂಕ್ ಖಾನ್‌ಗೆ ಹೆಸರಿಟ್ಟಿರಬಹುದು; ಆದರೆ ಈಗ ನಿಜಕ್ಕೂ ಬಾಲಿವುಡ್‌ನ ಬಾದ್‌ಷಾ ಆಗಿರುವಾತ ಅಮೀರ್ ಖಾನ್. ಲಗಾನ್, ತಾರೆ ಜಮೀನ್ ಪರ್, ಗಜನಿ, ತ್ರೀ ಈಡಿಯಟ್ಸ್ ಎಂಬ ನಾಲ್ಕು ಚಿತ್ರಗಳು ಸಾಲಾಗಿ ಉಂಟು ಮಾಡಿದ ದಾಖಲೆಗಳೆಲ್ಲವೂ ಅಮೀರನ ಹೆಸರನ್ನು ಬಾಲಿವುಡ್‌ನಲ್ಲಿ ಚಿರಸ್ಥಾಯಿಯಾಗಿಸಿತು. ಒಂದಕ್ಕಿಂತ ಒಂದು ಭಿನ್ನವಾದ ಚಿತ್ರಕಥೆ; ಹಾಗೆಯೇ ವಿಭಿನ್ನ ನಿರೂಪಣೆಗಳು ಅಮೀರ್‌ನ ವೃತ್ತಿಪರತೆ ಮತ್ತು ಬುದ್ಧಿವಂತಿಕೆ ಎರಡಕ್ಕೂ ಸಾಕ್ಷಿಯಾದವು. ಚಿತ್ರರಂಗಕ್ಕೆ ಬಂದ ಆರಂಭದಲ್ಲಿ ಕೋಲುಮುಖದ, ಚಾಕಲೇಟ್ ಹೀರೊ ಆಗಿದ್ದ ಅಮೀರ್ ಇವತ್ತು ಬೆಳೆದಿರುವ ಸೃಜನಶೀಲ ಎತ್ತರ ಎಂತಹ ಹೀರೋಗಳೂ ಅಸೂಯೆ ಪಟ್ಟುಕೊಳ್ಳುವಂತಹದ್ದು.

ಚಿತ್ರದ ಸಿದ್ಧತೆಗಳೆಲ್ಲ ಪೂರ್ಣವಾಗದೆ ಅಮೀರ್ ಒಂದಿಷ್ಟೂ ಸುಳಿವು ಬಿಟ್ಟುಕೊಡುವುದಿಲ್ಲ. ಬೇರೆ ಹೀರೊಗಳಂತೆ ಅಮೀರ್ ಚಿತ್ರ ಆರಂಭಕ್ಕೆ ಮುನ್ನವೇ ಪ್ರಚಾರದ ಡಬ್ಬಾ ಹೊಡೆದುಕೊಳ್ಳುವುದಿಲ್ಲ. ಪತ್ರಕರ್ತರನ್ನು ಓಲೈಸಿ ಪ್ರಚಾರ ಗಿಟ್ಟಿಸುವುದೂ ಇಲ್ಲ. ಆತನ ಗಮನ ಪೂರ್ತಿ ಕಥೆ, ಚಿತ್ರಕಥೆ ಮತ್ತು ನಿರ್ಮಾಣದ ಕಡೆಗೇ ಇರುತ್ತದೆ. ನಿರ್ಮಾಪಕರು ಬೇರೆಯಾದರೂ ಅವರ ಜತೆಗೆ ಹೊಂದಾಣಿಕೆಯ ಸೂತ್ರ ಇಲ್ಲದೆ ಅಮೀರ್ ಕಾಲ್‌ಷೀಟ್ ನೀಡುವುದೇ ಇಲ್ಲ. ಬಾಲಿವುಡ್ ತಾರೆಯರು ನಾ ಮುಂದು, ತಾ ಮುಂದು ಎಂದು ಪ್ರಶಸ್ತಿ ಗಿಟ್ಟಿಸಲು ಓಡಾಡುತ್ತಿದ್ದರೆ, ಅಮೀರ್ ಪ್ರಶಸ್ತಿ ಸಿಕ್ಕರೂ ಆ ಸಮಾರಂಭಕ್ಕೇ ಹೋಗುವುದಿಲ್ಲ!

ತ್ರೀ ಈಡಿಯಟ್ಸ್ ಎಂಬ ಸಿನಿಮಾದ ಸೂಪರ್ ಸಕ್ಸೆಸ್ ಬಳಿಕ ಅಮೀರ್‌ನ ಮುಂದಿನ ಚಿತ್ರ ಯಾವುದು ಎಂಬ ಕುತೂಹಲ ಎಲ್ಲೆಡೆ ವ್ಯಕ್ತವಾಗಿತ್ತು. ಇದೀಗ ಅದಕ್ಕೆ ಸ್ವಲ್ಪ ಉತ್ತರ ಸಿಕ್ಕಿದೆ. ಅಮೀರ್ ಖಾನ್‌ನ ಮುಂದಿನ ಚಿತ್ರದ ಶೈಲಿ ‘ಸಸ್ಪೆನ್ಸ್ ಡ್ರಾಮಾ’ ಎನ್ನುವುದು ಗೊತ್ತಾಗಿದೆ. ಸ್ವತಃ ಅಮೀರ್ ಈ ವಿಷಯವನ್ನು ಪತ್ರಕರ್ತರ ಮುಂದೆ ಒಪ್ಪಿಕೊಂಡಿದ್ದಾನೆ. ಪತ್ನಿ ಕಿರಣ್‌ರಾವ್ ನಿರ್ದೇಶನದ ‘ದೋಬಿ ಘಾಟ್’ ಜನವರಿ 21ರಂದು ತೆರೆ ಕಾಣುವುದು ನಿಶ್ಚಿತವಾಗಿರುವ ಬೆನ್ನಲ್ಲೆ , ಫೆಬ್ರುವರಿಯಲ್ಲಿ ಅಮೀರ್‌ಖಾನನ ಹೊಸ ಚಿತ್ರದ ಶೂಟಿಂಗ್ ಆರಂಭವಾಗಲಿದೆಯಂತೆ. ರೀಮಾ ಕಗ್ಟಿ ಮತ್ತು ಜೋಯಾ ಅಖ್ತರ್ ಈ ಹೊಸ ಚಿತ್ರಕ್ಕೆ ಚಿತ್ರಕಥೆ ಬರೆದಿದ್ದು, ರೀಮಾ ಚಿತ್ರವನ್ನು ನಿರ್ದೇಶಿಸಲಿದ್ದಾರೆ.

ಆದರೆ ಚಿತ್ರದ ಹೀರೋಯಿನ್‌ಗಳ ಕುರಿತು ಸಸ್ಪೆನ್ಸ್ ಮುಂದುವರಿದಿದೆ. ಆ ಬಗ್ಗೆ ಅಮೀರ್ ಬಾಯಿ ಬಿಟ್ಟಿಲ್ಲ. ಬಲ್ಲ ಮೂಲಗಳ ಪ್ರಕಾರ ಚಿತ್ರದ ನಾಯಕಿ ಕರೀನಾ ಕಪೂರ್! ಕರೀನಾಗೆ ಕೇಳಿದರೆ– ನೋ ಕಾಮೆಂಟ್ಸ್! ಜತೆಗೆ ಎರಡನೇ ನಾಯಕಿಯಾಗಿ ರಾಣಿ ಮುಖರ್ಜಿ ಆಯ್ಕೆಯಾಗಿದ್ದಾಳೆ ಎಂಬ ಗಾಳಿಸುದ್ದಿಯೂ ಹಬ್ಬಿದೆ. ದೀಪಾವಳಿ ಹಬ್ಬದ ದಿನ ಅಮೀರ್ ಮನೆಗೆ ಭೇಟಿ ಕೊಟ್ಟು ಪಟಾಕಿ ಹೊಡೆದಿದ್ದ ರಾಣಿ, ಆ ಬಳಿಕ ಅಮೀರ್ ನಿರ್ಮಾಣದ ‘ಪೀಪ್ಲಿ ಲೈವ್’ ಚಿತ್ರದ ಪ್ರಚಾರದಲ್ಲೂ ಪಾಲ್ಗೊಂಡಿದ್ದಳು. ಈ ಆತ್ಮೀಯತೆ ಈಗ ಹೀರೋಯಿನ್ ಪಟ್ಟ ಗಿಟ್ಟಿಸಿಕೊಟ್ಟಿದೆ ಎನ್ನುವುದು ಬಾಲಿವುಡ್ ಪಂಡಿತರ ಲೆಕ್ಕಾಚಾರ.

ಗಾಳಿಸುದ್ದಿಗಳು ಏನೇ ಇದ್ದರೂ ಅಮೀರ್ ಹೊಸ ಚಿತ್ರ ಈಗಾಗಲೆ ಬಾಲಿವುಡ್‌ನಲ್ಲಿ ಅಪೂರ್ವ ಕುತೂಹಲ ಹುಟ್ಟಿಸಿದೆ ಎನ್ನುವುದಂತೂ ಖಂಡಿತಾ. ಅಮೀರ್‌ನಂತಹ ಸೃಜನಶೀಲ ಪ್ರತಿಭಾವಂತ ಸಸ್ಪೆನ್ಸ್ ಥ್ರಿಲ್ಲರ್ ಮಾಡಿದರೂ, ಅದೊಂದು ಅದ್ಭುತ ಸಿನಿಮಾ ಆಗಲಿದೆ ಎಂಬ ನಂಬಿಕೆ ಬಾಲಿವುಡ್‌ನದ್ದು.

■ ಆಲೇಖ

